# ಮಮಕಾರವೆಂಬ ಹಗ್ಗ !



**ಮ**ನುಷ್ಯನು ಎಷ್ಟು ವಸ್ತುಗಾಗಿ ಹಾಗೂ ವ್ಯಕ್ತಿಗಳ ಜೊತೆ ಸಂಬಂಧ ಮಾಡುವನೋ ಅವೆಲ್ಲವುಗಳೂ ಇವನ ಕೊರಳಿಗೆ ಹಗ್ಗವನ್ನು ಕಟ್ಟುತ್ತವೆ (ಅವನನ್ನು ಬಂಧಿಸುತ್ತವೆ). ಒಂದೇ ಹಗ್ಗದಿಂದ ಕಟ್ಟಲ್ಪಟ್ಟ ಪಶುವಿಗೆ ಅದರಿಂದ ಬಿಡಿಸಿಕೊಳ್ಳುವುದು ಸಾಧ್ಯವಾಗದೆ ಇರುವಾಗ, ಕಣ್ಣಿಗೆ ಕಾಣದಿರುವ ಅಹಂಕಾರ, ಮಮಕಾರಗಳೆಂಬ ಅನಂತ ಹಗ್ಗಗಳಿಂದ ಕಟ್ಟಲ್ಪಟ್ಟ ಮನುಷ್ಯನೆಂಬ ಪಶುವಿಗೆ ಮುಕ್ತಿಯೆಂಬುದು ಮನದ ಮಂಡಿಗೆಯೇ ಸರಿ.

ಒಮ್ಮೆ ಗುರು-ಶಿಷ್ಯರಿಬ್ಬರು ನದಿಗೆ ಸ್ನಾನಕ್ಕೆ ಹೋದಾಗ ಒಕ್ಕಲಿಗನೋರ್ವನು ಬಹು ಸುಂದರವಾದ ಒಂದು ಎತ್ತನ್ನು ಅದೇ ತಾನೇ ಪೇಟೆಯಿಂದ ಖರೀದಿಸಿಕೊಂಡು, ಅದರ ಕೊರಳಿಗೆ ಹಗ್ಗವನ್ನು ಬಿಗಿಯಾಗಿ ಕಟ್ಟಿ, ತಾನು ಮುಂದಾಗಿ ಅದನ್ನು ಹಿಡಿದುಕೊಂಡು ಹೊರಟಿದ್ದನು. ಎತ್ತು ಅವನನ್ನು ಹಿಂಬಾಲಿಸುತ್ತಿತ್ತು . ಆ ದೃಶ್ಯವನ್ನು ನೋಡಿ ಗುರುಗಳು ಶಿಷ್ಯನಿಗೆ ಪ್ರಶ್ನೆ ಮಾಡಿದರು : ''ಎತ್ತು ಹಾಗೂ ಒಕ್ಕಲಿಗ ಇವರಿಬ್ಬರೊಳಗೆ ಯಾರ ಕೊರಳಿಗೆ ಹಗ್ಗವು ಕಟ್ಟಲ್ಪಟ್ಟಿದೆ?'' ಎಂದು. ಆಗ ಶಿಷ್ಯನು, ''ಗುರುಗಳೇ! ನಿಮ್ಮ ದೃಷ್ಟಿಯು ಮಂದವಾಗಿದೆಯೇನು? ಎತ್ತಿನ ಕೊರಳಲ್ಲಿಯ ಹಗ್ಗವು ಕಾಣುವುದಿಲ್ಲವೆ? ಇದೂ ಅಲ್ಲದೆ ಪಶುಗಳೇ ಕಟ್ಟಲ್ಪಡುತ್ತವೆಯೇ ವಿನಃ ಮನುಷ್ಯರೆಂದಾದರೂ ಹಗ್ಗದಿಂದ ಕಟ್ಟಲ್ಪಡುತ್ತಾರೆಯೆ? ಹಗ್ಗವನ್ನು ಹಿಡಿದ ಒಕ್ಕಲಿಗ ಮುಂದೆ ಮುಂದೆ ಹೊರಟಿರುವನು. ಅದರಿಂದ ಕಟ್ಟಲ್ಪಟ್ಟ ಎತ್ತು ಹಿಂದೆ-ಹಿಂದೆ ಹೋಗುತ್ತಿದೆ ನೋಡಿರಿ'' ಎಂದ. ಆಗ ಗುರುಗಳು ಇವನಿಗೆ ಈಗಲೇ ಶಾಸ್ತ್ರಜ್ಞಾನ ಮಾಡಿಕೊಡಬೇಕೆಂದು ಒಕ್ಕಲಿಗನನ್ನು ಕರೆದು, ''ತಮ್ಮಾ! ಈ ಎತ್ತು ಯಾರದು?'' ಎಂದು ಪ್ರಶ್ನಿಸಿದರು. ''ಸ್ವಾಮಿ! ಇದು ನನ್ನದು, ಈಗ ತಾನೇ ಐದು ಸಾವಿರ ರೂಪಾಯಿ ಕೊಟ್ಟು ತಂದಿರುವೆನು'' ಎಂದ. ಆಗ ಗುರುಗಳು ನೋಡುವ ನೆಪದಲ್ಲಿ ಎತ್ತಿನ ಕೊರಳ ಹಗ್ಗವನ್ನು ಬಿಚ್ಚಿಬಿಟ್ಟರು. ಬಿಡುಗಡೆ ಹೊಂದಿದ ಎತ್ತು ಸಂಸ್ಕಾರ ಬಲದಿಂದ ತನ್ನ ಮೊದಲಿನ ಮನೆಯ ಕಡೆಗೆ ಓಡಹತ್ತಿತು. ಇದನ್ನು ನೋಡಿದ ಒಕ್ಕಲಿಗನು ಬೆಚ್ಚಿಬಿದ್ದು ಅದನ್ನು ಹಿಡಿಯುವುದಕ್ಕಾಗಿ ಓಡಿಹೋದ. ಎತ್ತು ಮುಂದೆ ಓಡುತ್ತಿದೆ, ಒಕ್ಕಲಿಗ ಹಿಂದೆ ಓಡುತ್ತಿದ್ದಾನೆ. ಆಗ ಗುರುಗಳು,



''ನೋಡು ಈಗ ಮುಂದೆ ಯಾರು ಇದ್ದಾರೆ? ಹಿಂದೆ ಯಾರು ಇದ್ದಾರೆ? ಯಾರ ಕೊರಳಲ್ಲಿ ಹಗ್ಗವಿದೆ?'' ಎಂದು ಪ್ರಶ್ನಿಸಿದಾಗ, ''ಗುರುಗಳೇ! ಒಕ್ಕಲಿಗನ ಕೊರಳಲ್ಲಿ ಹಗ್ಗವೇನೂ ಇಲ್ಲ, ಆದರೆ ಎತ್ತಿನ ಹಿಂದೆ ಯಾಕೆ ಓಡುತ್ತಿದ್ದಾನೆ?'' ಶಿಷ್ಯನ ಈ ಆಶ್ಚರ್ಯಕರವಾದ ಪ್ರಶ್ನೆಯನ್ನು ಕೇಳಿ, ''ನೋಡು ಇದೇ ಮಮಕಾರವೆಂಬ ಹಗ್ಗ'' ಎಂದು ಗುರು ತನ್ನ ಶಿಷ್ಯನನ್ನು ಎಚ್ಚರಿಸಿದರು.

ಸಂಗ್ರಹ: ಸ್ವಾಮಿ ತೀರ್ಥಕರಾನಂದ


**ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಶಿಬಿರ)**

**2019 ಜುಲೈ 3 ರಿಂದ 9ರ ವರೆಗೆ ;** *ಮಾಧ್ಯಮ:* **ಕನ್ನಡ ಮತ್ತು ಇಂಗ್ಲಿಷ್**

**ಊಟ ಹಾಗೂ ವಿಶೇಷ ವಸತಿ ಸೌಲಭ್ಯಗಳಿರುವ ಐದು ದಿನಗಳ ಶಿಬಿರಕ್ಕಾಗಿ: ರೂ. 2,500/- ಮಾತ್ರ**

*ಶಿಬಿರದ ಎಲ್ಲ ಐದು ದಿನಗಳು ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. *130 ಶಿಬಿರಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ. *ಒಂದು ವೇಳೆ ಆಯ್ಕೆಗೊಂಡ ಶಿಬಿರಾರ್ಥಿಗಳು ಭಾಗವಹಿಸದಿದ್ದಲ್ಲಿ ಅವರ ಪ್ರತಿನಿಧಿಯಾಗಿ ಬೇರೆಯವರಿಗೆ ಅವಕಾಶವಿರುವುದಿಲ್ಲ. *ಒಂದು ವೇಳೆ ಶಿಬಿರಾರ್ಥಿಗಳು ಶಿಬಿರಕ್ಕೆ ಭಾಗವಹಿಸದಿದ್ದಲ್ಲಿ ರೂ. 2000/- ಅನ್ನು ಮಾತ್ರ ಹಿಂದಿರುಗಿಸಲಾಗುವುದು. *ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ವಿಳಾಸವಿರುವ (10cm x 23cm) ಲಕೋಟೆಗೆ ರೂ.5/- ಅಂಚೆ ಸ್ಟ್ಯಾಂಪ್ ಲಗತ್ತಿಸಿ ಸಂಚಾಲಕರ ಹೆಸರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ. *ಅರ್ಜಿಫಾರಂಗಳನ್ನು www.rimse.org.in ವೆಬ್‌ಸೈಟಿನಿಂದಲೂ ಡೌನ್‌ಲೋಡ್ ಮಾಡಿ, ಭರ್ತಿಮಾಡಿ, ಸ್ಕ್ಯಾನ್ ಮಾಡಿ ಕಳುಹಿಸಬಹುದು. *ತುಂಬಿದ ಅರ್ಜಿಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ಜೂನ್ 15, 2019.

ವಿಳಾಸ: Ramakrishna Institute of Moral and Spiritual Education, Yadavagiri, Mysore-570020
Phone: 0821-2417666 ; E-mail: mysuru.rimse@rkmm.org; Website: www.rimse.org.in